ದಿ: 28-07-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ (ಮಂಜುನಾಥ ಬಿ)**:

1. ಖಾಲಿ ಜಾಗದ ವಿಚಾರವಾಗಿ ಆರೋಪಿತರು ದಿನನಿತ್ಯ ಗಲಾಟೆ ಮಾಡುತ್ತಿರುವುದರಿಂದ ನನ್ನ ಯಜಮಾನರು ವಿಷ ಕುಡಿದು ದಿಃ 12-06-2016 ರಂದು ತೀರಿಕೊಂಡರು. ಆಗ ರಾತ್ರಿ 9.30 ಗಂಟೆ ಆಗಿತ್ತು. ಸದರಿ ದಿನಾಂಕದಂದು ನಾನು, ನನ್ನ ಮಗ ಚಾಸಾ-6, ನನ್ನ ಗಂಡ ನಮ್ಮ ಮನೆಯಲ್ಲಿ ಊಟ ಮಾಡಿ ಮಲಗಿಕೊಂಡಿದ್ದೆವು. ಆಗ ಮನೆಯ ಬಾಗಿಲ ಹತ್ತಿರ ಆರೋಪಿತರು ನನ್ನ ಯಜಮಾನರಿಗೆ ' ಷಂಡ ನನ್ನ ಮಗನೇ ಹೊರಗಡೆ ಬಾರೋ ನೀನು, ಖಾಲಿ ಜಾಗ ನನ್ನದು ' ಅಂತ ಬೈದಾಡುತ್ತಿದ್ದರು. ಅದಕ್ಕೆ ನನ್ನ ಗಂಡ ಆ ರೀತಿ ಯಾಕೆ ಬೈಯುವುದಾಗಿ ಕೇಳಿದರು. ಅದಕ್ಕೆ ಆರೋಪಿತರು ' ನನ್ನ ಜಾಗದಲ್ಲಿ ನೀನು ಓಡಾಡುತ್ತೀಯಾ ವಿಷ ಕುಡಿದು ಹೋಗು ಸಾಯಿ ಜೀವ ಯಾಕೆ ಇಟ್ಟುಕೊಂಡಿದ್ದೀಯಾ ' ಅಂತ ಬೈದು ತಬ್ಬಿದರು. ಆಗ ನನ್ನ ಗಂಡ ಕೆಳಗಡೆ ಬಿದ್ದರು. ಗುದ್ದಾಡೋದು ಬೇಡ ಅಂತ ನಾನು ಮತ್ತು ನನ್ನ ಮಗ ಚಾಸಾ-6 ರವರು ನನ್ನ ಗಂಡನಿಗೆ ಒಳಗೆ ಕಳುಹಿಸಿದೆವು. ಆರೋಪಿತರ ಮಾತನ್ನು ಬೇಜಾರು ಮಾಡಿಕೊಂಡು ನನ್ನ ಗಂಡ ಕಾಡಜ್ಜಿ ಮನೆಯಲ್ಲಿ ವಿಷ ಕುಡಿದು ತೀರಿಕೊಂಡ. ನಾನು ಮತ್ತು ನನ್ನ ಮಗ ಹೋಗಿ ನೋಡಿದಾಗ ನನ್ನ ಗಂಡ ಆ ಕಡೆ ಮತ್ತು ಈ ಕಡೆ ಒದ್ದಾಡುತ್ತಾ ಇದ್ದರು. ಆಗ ನಾವು ಗಾಬರಿಗೊಂಬು ಆಟೋದಲ್ಲಿ ಸಿ.ಜಿ. ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಅಲ್ಲಿ ಆಸ್ಪತ್ರೆಯಲ್ಲಿ ನನ್ನ ಗಂಡನಿಗೆ ವಾಂತಿ ಮಾಡಿಸಿ ಮೆಡಿಸಿನ್ ಕೊಟ್ಟರು. ಅಲ್ಲಿ ಅವರಿಗೆ ಆರಾಮ ಆಗಲಿಲ್ಲ ಮಾರನೇ ದಿನ ಬೆಳಿಗ್ಗೆ 6.00 ಗಂಟೆಗೆ ತೀರಿಕೊಂಡರು. ಆರೋಪಿತರೇ ನನ್ನ ಗಂಡ ತೀರಿಕೊಳ್ಳಲು ಕಾರಣಕಾರರಾಗಿರುತ್ತಾರೆ. ಈ ವಿಚಾರವನ್ನು ನಾನು ನನ್ನ ತವರು ಮನೆಗೆ ದೂರವಾಣಿ ಮುಖಾಂತರ ಮಾಡಿ ತಿಳಿಸಿದೆ. ಅವರು ಬಂದ ನಂತರ ನಾನು ನನ್ನ ತಮ್ಮ ಚಾಸಾ-11 ರವರಿಗೆ ಹೇಳಿ ದೂರನ್ನು ಬರೆಸಿ ಪೊಲೀಸರಿಗೆ ಕೊಟ್ಟಿದ್ದೇನೆ. ಈಗ ನನಗೆ ತೋರಿಸಿದ ದಾಖಲೆ ನಾನು

ಕೊಟ್ಟ ದೂರಾಗಿದ್ದು, ಅದನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-1 ಅಂತ ಸಹಿಯನ್ನು ನಿಪಿ-1(ಎ) ಅಂತ ಗುರುತಿಸಲಾಯಿತು. ಶವ ಪಂಚನಾಮೆ ಕಾಲಕ್ಕೆ ತೆಗೆದ ಪೋಟೋವನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-2 ಅಂತ ಗುರುತಿಸುತ್ತೇನೆ. ಆರೋಪಿತರನ್ನು ಗುರುತಿಸಲು ನನಗೆ ಬರುತ್ತದೆ. ( ಆರೋಪಿತರು ಗೈರು ಹಾಜರಾಗಿದ್ದು ಆರೋಪಿ ಪರ ವಕೀಲರು ಆರೋಪಿತರನ್ನು ಗುರುತಿಸಲು ತಕರಾರು ಇಲ್ಲ ಅಂತ ಹೇಳುತ್ತಾರೆ.)

**ಪಾಟೀ ಸವಾಲುಃ ಶ್ರೀಮತಿ ಕೆ.ಎನ್.ಯು., ವಕೀಲರಿಂದ ಆರೋಪಿತರ ಪರವಾಗಿ**:

2. 1 ನೇ ಆರೋಪಿಯ ಹೆಂಡತಿ ನನ್ನ ಅಕ್ಕ. ನಮ್ಮ ಮನೆ ಮತ್ತು ಅವರ ಮನೆ ಅಕ್ಕಪಕ್ಕ ಇದೆ ಅಂದರೆ ನಿಜ. ಮೊದಲಿನಿಂದಲೂ ನಮ್ಮ ಮತ್ತು ಆರೋಪಿತರ ನಡುವೆ ಜಗಳ ಆಗುತ್ತಿತ್ತು ಪೊಲೀಸ್ ಠಾಣೆಯವರೆಗೆ ಹೋಗಿದ್ದೆವು ಅಂದರೆ ಸುಳ್ಳು. ಇದರ ವಿಚಾರವಾಗಿ ಪಂಚಾಯಿತಿ ಆಗಿದೆ ಅಂದರೆ ಸುಳ್ಳು. ದೂರಿನಲ್ಲಿ ಏನು ಬರೆದಿದೆ ಅಂತ ನನಗೆ ಮಾಹಿತಿ ಇದೆ. ಜಾಗದ ಬಗ್ಗೆ ನಮಗೂ ಮತ್ತು ಆರೋಪಿತರರಿಗೂ ಸುಮಾರು ಸಲ ಜಗಳ ಆಗುತ್ತಿತ್ತು ಅಂದರೆ ನಿಜ. ಜಗಳ ಆದಾಗ ಪೊಲೀಸ್ ಠಾಣೆಗೆ ಹೋಗಿದ್ದೆವು ಅಂದರೆ ನಿಜ. ಊರಿನ ಗ್ರಾಮಸ್ಥರು ಈ ವಿಷಯವಾಗಿ ಪಂಚಾಯಿತಿ ಮಾಡಿಲ್ಲ ಆದರೆ ಹೇಳಿ ಹೋಗುತ್ತಿದ್ದರು. ನಮ್ಮ ಮನೆಯ ಅಕ್ಕಪಕ್ಕದಲ್ಲಿ ಬೇರೆ ಮನೆಗಳು ಸುತ್ತಲೂ ಇರುತ್ತವೆ ಅಂದರೆ ನಿಜ.

ಮೊದಲು ನಾನು ಕೃಷಿ ಇಲಾಖೆಗೆ ದಿನಗೂಲಿ ನೌಕರರಾಗಿ ಹೋಗುತ್ತಿದ್ದೆ ಅಂದರೆ ಸುಳ್ಳು. 3-4 ವರ್ಷಗಳಿಂದ ನನ್ನ ಗಂಡ ಬೇರೆಯಾರಿ ಒಂದು ಷಡ್ ನಲ್ಲಿ ವಾಸವಾಗಿದ್ದರು ಅಂದರೆ ಸುಳ್ಳು. ನಾನೇ ನನ್ನ ಗಂಡನಿಗೆ ಹಗಲು-ರಾತ್ರಿ ತುಂಬಾ ತೊಂದರೆ ಕೊಡುತ್ತಿದ್ದೆ ಅಂದರೆ ಸುಳ್ಳು. ನಾನು ಮತ್ತು ನನ್ನ ಮಕ್ಕಳು ನನ್ನ ಗಂಡನಿಗೆ ಹಗಲು-ರಾತ್ರಿ ಹೊಡೆಯುವುದು ಬಡೆಯುವುದು ಮತ್ತು ಮನೆಯಿಂದ ಹೊರಗಡೆ ಹಾಕುತ್ತಿದ್ದೆವು ಅಂದರೆ ಸುಳ್ಳು. ನಾನು ಕೃಷಿ ಇಲಾಖೆಗೆ ದಿನಗೂಲಿ ನೌಕರರಾಗಿ ಹೋಗುತ್ತಿರುವಾಗ ಅಲ್ಲಿ ನನಗೆ

ಬುಡೇನ ಸಾಬ್ ರವರೊಂದಿಗೆ ಅನೈತಿಕ ಸಂಬಂಧ ಇತ್ತು ಅಂದರೆ ಸುಳ್ಳು. ಆ ರೀತಿ ಸಂಬಂಧ ಇರುವುದು ನನ್ನ ಗಂಡನಿಗೆ ಗೊತ್ತಾಗಿ ಅವರು ನನಗೆ ಸಾಕಷ್ಟು ಸಲ ಬುದ್ದಿವಾದ ಹೇಳಿದ್ದರು ಅಂದರೆ ಸುಳ್ಳು. ಆದರೂ ಸಹ ನಾನು ಅವರೊಂದಿಗೆ ನಾನು ಸಂಬಂಧವನ್ನು ಮುಂದುವರೆಸಿದೆನು ಅಂದರೆ ಸುಳ್ಳು. ಆಗ ಊರಿನ ಜನರು ನನ್ನ ಗಂಡನಿಗೆ ಟೀಕಿಸುತ್ತಿದ್ದರು ಇದರಿಂದ ನನ್ನ ಗಂಡ ಮನ ನೊಂದು ವಿಷ ಕುಡಿದು ಸತ್ತರು ಅಂದರೆ ಸುಳ್ಳು. 1 ನೇ ಆರೋಪಿಯ ಬಲಗೈಗೆ 05 ಬೆರಳು ಇರುವುದಿಲ್ಲ. 2 ನೇ ಆರೋಪಿ ಹಿರಿಯ ನಾಗರಿಕರು ಮತ್ತು 70 ವರ್ಷ ವಯಸ್ಸಾಗಿದೆ ಅಂದರೆ ನಿಜ. ಅವರಿಗೆ ಸರಿಯಾಗಿ ಓಡಾಡಲು ಬರುವುದಿಲ್ಲ ಅಂದರೆ ಸುಳ್ಳು.

3. ದೂರನ್ನು ಪೊಲೀಸ್ ಠಾಣೆಯಲ್ಲಿಯೇ ಬರೆಸಿ ಕೊಟ್ಟಿದ್ದೇನೆ. ನಾನು ಹೇಳಿದ ಹಾಗೆ ನನ್ನ ತಮ್ಮನ ಹತ್ತಿರ ದೂರನ್ನು ಬರೆಸಿ ಪೊಲೀಸರಿಗೆ ಕೊಟ್ಟಿದ್ದೇನೆ. ನನ್ನ ಮಗ ಶಿವರಾಜ SSLC ಯವರೆಗೆ ಓದಿದ್ದಾನೆ. ಇನ್ನೊಬ್ಬನ ಮಗ ಶಿಕ್ಷಣ ಎಲ್ಲಿಯವರೆಗೂ ಆಗಿದೆ ಅಂತ ನನಗೆ ಗೊತ್ತಿಲ್ಲ. ದೂರನ್ನು ಶಿವರಾಜ ಹತ್ತಿರ ಬರೆಸಿಕೊಡಲು ತೊಂದರೆ ಇರಲಿಲ್ಲ ಅಂದರೆ ನನ್ನ ಗಂಡನಿಗೆ ಈ ತರ ಆಗಿದ್ದರಿಂದ ನಾನು ಗಾಬರಿ ಆಗಿದ್ದೆ. ನನಗೆ ಅನುಕೂಲವಾಗುವಂತೆ ನನ್ನ ತಮ್ಮನ ಕಡೆಯಿಂದ ದೂರನ್ನು ಬರೆಸಿಕೊಂಡಿದ್ದೇನೆ ಅಂದರೆ ಸುಳ್ಳು. ನಾನು ಹೇಳಿದ ರೀತಿಯಲ್ಲಿ ನನ್ನ ಗಂಡನಿಗೆ ಬೈದಿಲ್ಲ ಮತ್ತು ಘಟನೆ ಆಗಿಲ್ಲ ಅಂದರೆ ಸುಳ್ಳು. ನನ್ನ ನಡುವಳಿಕೆಯಿಂದ ನನ್ನ ಗಂಡ ಬೇಸತ್ತು ವಿಷ ಕುಡಿದು ಸತ್ತರು ಅಂದರೆ ಸುಳ್ಳು. ಆರೋಪಿತರು ನನ್ನ ಗಂಡನ ಸಾವಿಗೆ ಕಾರಣಕರ್ತರು ಆಗಿಲ್ಲ ಅಂದರೆ ಸುಳ್ಳು.

**<u>ಮರುವಿಚಾರಣೆಃ</u>** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

SC.177/2019 PW-1

ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,
ದಾವಣಗೆರೆ.